ವಿಷಯ : ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದಲ್ಲಿ 'ದೇವರಾಜ್ ಅರಸ್ ವೃತ್ತ' ನಾಮಕರಣ ಮಾಡುವ ಬಗ್ಗೆ.

Q : 365

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದಲ್ಲಿ ಒಂದು ವೃತ್ತವನ್ನು 'ದೇವರಾಜ್ ಅರಸ್ ವೃತ್ತ' ಎಂದು ಹೆಸರಿಡಲು ತೀರ್ಮಾನಿಸಿದೆಯೇ?

ಆ) ಹಾಗಿದ್ದಲ್ಲಿ, ದೇವರಾಜ್ ಅರಸು ಅವರ ಹೆಸರನ್ನಿಡುವ ಆ ವೃತ್ತವು ಯಾವುದು?

ಇ) ದೇವರಾಜ್ ಅರಸು ಅವರ ಪ್ರತಿಮೆಯನ್ನು ಆ ವೃತ್ತದಲ್ಲಿ ಸ್ಥಾಪಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ದೇವರಾಜ್ ಅರಸು ಅವರ ಪ್ರತಿಮೆಯನ್ನು ಅವರ ಹೆಸರನ್ನಿಟ್ಟಿರುವ ಬೆಂಗಳೂರು ನಗರದಲ್ಲಿಯ ರಸ್ತೆಯಲ್ಲಿ ಸ್ಥಾಪಿಸುವ ಪ್ರಸ್ತಾಪವಿದೆಯೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) 21ನೇ ವಿಭಾಗದಲ್ಲಿರುವ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಪಕ್ಕದಲ್ಲಿ ಖೋಡೆ ಫ್ಯಾಕ್ಟರಿ ಮುಂಭಾಗದಲ್ಲಿರುವ ವೃತ್ತಕ್ಕೆ ' ದೇವರಾಜ್ ಅರಸ್ ವೃತ್ತ' ಎಂದು ನಾಮಕರಣ ಮಾಡಿರುತ್ತದೆ.

ಇ) ಇಲ್ಲ.

ಈ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ವಿಷಯ : ಜಲಮಂಡಲಿಯವರಿಂದ ಸಂಚಾರಿ ಕೌಂಟರ್‌ಗಳು.

Q: 366

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿರುವಂತೆ ನೀರಿನ ಬೆಲೆ ಪಟ್ಟಿಯನ್ನು ಸಂದಾಯ ಮಾಡಲು ಬೆಂಗಳೂರು ನಗರದ ನಾಗರೀಕರ ಅನುಕೂಲಕ್ಕಾಗಿ ಹಣ ಪಡೆಯುವ ಸಂಚಾರಿ ಕೌಂಟರ್‌ಗಳು ಬೆಂಗಳೂರು ಜಲ ಮಂಡಳಿಯಲ್ಲಿ ಇದೆಯೇ?

ಆ) ಇಲ್ಲವಾಗಿದಲ್ಲಿ, ಸಂಚಾರಿ ಕೌಂಟರ್‌ಗಳನ್ನು ಶುರು ಮಾಡಲು ಜಲ ಮಂಡಳಿಯು ಪ್ರಸ್ತಾವನೆ ಮಾಡಿದೆಯೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.
ಆ) ಇದು ಸಧ್ಯದಲ್ಲಿ ಸಂಚಾರಿ ಕೌಂಟರ್‌ಗಳನ್ನು ತೆರೆಯುವ ಪ್ರಸ್ತಾವನೆಯನ್ನು ಜಲ ಮಂಡಳಿಯು ಮಾಡಿರುವುದಿಲ್ಲ.

ವಿಷಯ : ವಿರಾಜಪೇಟೆ ತಾಲ್ಲೂಕಿನ ನಾದು ಅರ್ಜಿ ಗಾಮದ 40 ಗಿರಿಜನ ಕುಟುಂಬಗಳಿಗೆ ಸರ್ಕಾರದಿಂದ ಸೌಲಭ್ಯ ಸಿಗದಿರುವುದು.

Q: 695

ಶ್ರೀಮತಿ. ಸುಮಾವಸಂತ್ (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ತಾಲ್ಲೂಕಿನ ನಾದುಅರ್ಜಿ ಗ್ರಾಮದ 40 ಗಿರಿಜನ ಕುಟುಂಬಗಳಿಗೆ ಸರ್ಕಾರದಿಂದ ಸಿಗುವ ಸವಲತ್ತು ಸಿಗದಿರಲು ಕಾರಣವೇನು?
ಆ) ಸವಲತ್ತುಗಳು ಸಿಗದಿರುವ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿದೆಯೆ?
ಇ) ಹಾಗಿದ್ದಲ್ಲಿ ಅವರೆಲ್ಲರಿಗೂ ಯಾವಾಗ ಸವಲತ್ತುಗಳನ್ನು ಒದಗಿಸಲಾಗುವುದು.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು) :

ಅ) ವಿರಾಜಪೇಟೆ ತಾಲ್ಲೂಕು ನಾದುಅರ್ಜಿ ಗ್ರಾಮದ ಗಿರಿಜನ ಕುಟುಂಬಗಳಿಗೆ ಸವಲತ್ತು ಸಿಕ್ಕಿರುತ್ತದೆ. ಈ ಗ್ರಾಮದಲ್ಲಿರುವ 18 ಗಿರಿಜನ ಕುಟುಂಬಗಳಿಗೆ ತಲಾ 22 ಸೆಂಟ್ಸ್ ಜಮೀನನ್ನು ನೀಡಿ ಹಕ್ಕುಪತ್ರ ಸಹ ವಿತರಿಸಲಾಗಿದೆ. ಗಿರಿಜನ ಉಪಯೋಜನೆಯಡಿ 18 ಕುಟುಂಬಗಳಿಗೆ ಮತ್ತು ಐ.ಆರ್.ಡಿ.ಪಿ. ಯೋಜನೆಯಡಿ 2 ಕುಟುಂಬಗಳಿಗೆ ನೀಡಿರುವ ಸವಲತ್ತುಗಳ ವಿವರ ಹೀಗಿದೆ :-
ಸದರಿ ಗ್ರಾಮದ ಒಬ್ಬ ಗಿರಿಜನ ಫಲಾನುಭವಿಗೆ ಗಿರಿಜನ ಉಪಯೋಜನೆಯಲ್ಲಿ ಹಂದಿ ಘಟಕ, ಜೇನು ಕೃಷಿಗಾಗಿ 5 ಕುಟುಂಬಗಳಿಗೆ ಜೇನು ಪೆಟ್ಟಿಗೆ, ಹಾಗೂ 12 ಕುಟುಂಬಗಳಿಗೆ ತೆಂಗಿನ ಸಸಿ ಮುಂತಾದ ಸವಲತ್ತುಗಳನ್ನು ಈಗಾಗಲೇ ಒದಗಿಸಲಾಗಿದೆ. ಐ.ಆರ್.ಡಿ.ಪಿ. ಅಡಿಯಲ್ಲಿ ಇಬ್ಬರು ಫಲಾನುಭವಿಗಳಿಗೆ ಉಳುಮೆ ಎತ್ತು ಮತ್ತು ಹಾಲು ಕರೆಯುವ ಹಸುಗಳನ್ನು ನೀಡಲಾಗಿದೆ. ಗಿರಿಜನರ ಉಪಯೋಗಕ್ಕಾಗಿ ಸಂಪರ್ಕ ರಸ್ತೆಯನ್ನೂ ನಿರ್ಮಿಸಲಾಗಿದೆ.
ಆ) ಇಲ್ಲ.
ಇ) ಉದ್ಭವಿಸುವುದಿಲ್ಲ.

ವಿಷಯ :- ಬೆಂಗಳೂರು ನಗರದಲ್ಲಿ ನೀರಿನ ಬೇಡಿಕೆ.